**1. ಚೌಕದಲ್ಲಿರುವ ಪದಗಳನ್ನು ಮುಂದಿನ ಪದಗಳಲ್ಲಿ ಗುರುತಿಸಿ ಚೌಕ ಹಾಕಿಸಿ.**

| | | | | |
|---|---|---|---|---|
| ಏಡಿ | ಏತ | ಏಡಿ | ಏರು | ಏಣಿ |
| ಸೇರು | ಸೇದು | ಸೇಡು | ಸೇರು | ಸೇಬು |
| ಛಲ | ಫಲ | ಛಲ | ಬಲ | ಜಲ |
| ಕೀಟ | ಕೀಟ | ಪೀಠ | ಸೀತ | ತೀರ |

**2. ಪದ ಹಾಗೂ ವಾಕ್ಯಗಳನ್ನು ಓದಿಸಿ.**

ಫಾತಿಮಾ ಭರಮ ಜನ ಏಟು ಹಠ

ಪೀಡಿಸು ಕಛೇರಿ ಜಾಣೆ ಕೂಟ ಆಧಾರ

ಭರಮನ ಹಠ ಸರಿ ಕಾಣದು

ಅತನೂರಿನ ಸಾಧನೆ ಮಾದರಿ ಆಯಿತು

ಛಲ ಫಲ ನೀಡುವುದು

**3. ಕೆಳಗಿನ ಪದಗಳನ್ನು ಬಳಸಿ ವಾಕ್ಯ ಮಾಡಿಸಿ.**

ಕಂಬನಿ : ..............................................................................

..............................................................................

ಕಾಟ : ..............................................................................

..............................................................................

ಅವ್ವ : ..............................................................................

..............................................................................

ಫಲ : ..............................................................................

..............................................................................

**4. ಕೆಳಗಿನ ಗದ್ಯಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಲು ತಿಳಿಸಿ.**

ಭಾರತಿ ಫಾತಿಮಾಳ ಗೆಳತಿ. ಫಾತಿಮಾ ಗೆಳತಿ ಭಾರತಿಯ ಸಲಹೆ ಪಡೆದಳು. ಖಾರದಪುಡಿ ಮಾಡುವ ಕೆಲಸ ಶುರು ಮಾಡಿದಳು.

ಛಲದಿಂದ ದುಡಿದಳು. ದಿನದಿನಕೆ ಆದಾಯ ಏರಿತು. ಬದುಕು ಸುಖಮಯ ಆಯಿತು. ಫಾತಿಮಾಳ ಛಲದ ದುಡಿಮೆ ಫಲ ನೀಡಿತು.

ಫಾತಿಮಾ ಯಾರ ಸಲಹೆ ಪಡೆದಳು?

.......................................................................................................

.......................................................................................................

ಫಾತಿಮಾ ಯಾವ ಕೆಲಸ ಶುರು ಮಾಡಿದಳು?

.......................................................................................................

.......................................................................................................

ಛಲದ ದುಡಿಮೆ ಏನು ನೀಡಿತು?

.......................................................................................................

.......................................................................................................

5. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

ದಾದಿಯು ಯಾರಿಗೆ ಉಪಚರಿಸಿದಳು?

.......................................................................................................

.......................................................................................................

ಉಮಾಳ ಆಸೆ ಏನು?

.......................................................................................................

.......................................................................................................

ಭರಮ ಹೆಂಡತಿಗೆ ಏನು ತರಲು ಪೀಡಿಸಿದ?

.......................................................................................................

.......................................................................................................

ರಾಮವ್ವ ಜನರಿಗೆ ಏನು ತಲುಪಿಸಿದಳು?

.......................................................................................................

.......................................................................................................

6. ಖಾಲಿ ಬಿಟ್ಟ ಜಾಗವನ್ನು ತುಂಬಿಸಲು ತಿಳಿಸಿ.

ಹಿರಿಯರಿಗೆ ಉಮಾಳ ________ ಮಾಡುವ ಆಸೆ

ಸೀತೆ ಭಯದಿಂದ ___________ ಹೋದಳು

ಫಾತಿಮಾಳ ಛಲದ ದುಡಿಮೆ _______ ನೀಡಿತು

ರಾಮವ್ವಳ ________ ಮನೆ ಮನೆ ಮಾತಾಗಿದೆ

7. ಬಿಟ್ಟ ಅಂಕಿಗಳನ್ನು ಕ್ರಮವಾಗಿ ತುಂಬಿಸಲು ತಿಳಿಸಿ.

| | | | | | | | | | |
|---|---|---|---|---|---|---|---|---|---|
| | 92 | | | 95 | | | | 99 | |

| | | | | | | | | | |
|---|---|---|---|---|---|---|---|---|---|
| 100 | | 300 | | | 600 | | | | 1000 |

8. ಕೂಡಿದಾಗ ಬರುವ ಮೊತ್ತವನ್ನು ಆವರಣದಲ್ಲಿ ಕೊಟ್ಟಿರುವ ಸಂಖ್ಯೆಗಳಲ್ಲಿ ಆರಿಸಿ ತುಂಬಿಸಿ.

30 + 12 = ☐ (42, 43, 36)

9. ಕಳೆದಾಗ ಬರುವ ಮೊತ್ತವನ್ನು ಆವರಣದಲ್ಲಿ ಕೊಟ್ಟಿರುವ ಸಂಖ್ಯೆಗಳಲ್ಲಿ ಆರಿಸಿ ತುಂಬಿಸಿ.

87 – 44 = ☐ (27, 43, 47)

10. ಈ ಕೆಳಗಿನ ಕೂಡುವ, ಕಳೆಯುವ ಲೆಕ್ಕ ಮಾಡಿಸಿ.

$$\begin{array}{r} 88 \\ +\ 11 \\ \hline \\ \hline \end{array} \qquad \begin{array}{r} 61 \\ +\ 18 \\ \hline \\ \hline \end{array} \qquad \begin{array}{r} 27 \\ -\ 13 \\ \hline \\ \hline \end{array} \qquad \begin{array}{r} 48 \\ -\ 25 \\ \hline \\ \hline \end{array}$$

**11. ಕೆಳಗಿನ ಗದ್ಯಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ.**

ಮತದಾನ ಮಾಡಲು ವಯಸು 18 ತುಂಬಿರಬೇಕು. 18 ತುಂಬಿದ ನಂತರ ಹುಟ್ಟಿದ ದಿನಾಂಕ ಹಾಗೂ ವಾಸದ ಊರಿನ ವಿಳಾಸದ ದಾಖಲೆ ನೀಡಿ ಮತದಾರರ ಪಟ್ಟಿಗೆ ಹೆಸರು ನೋಂದಣಿ ಮಾಡಿಸಬೇಕು. ನೋಂದಣಿ ಮಾಡಿಸಿದವರು ಮತದಾನ ಮಾಡಬಹುದು. ಮತದಾನ ಮತದಾರನ ಅವಕಾಶ.

ಯಾವ ವಯಸಿನವರು ಮತದಾನ ಮಾಡಬಹುದು?

..........................................................................................................

..........................................................................................................

ಮತದಾರರ ಪಟ್ಟಿಗೆ ನೋಂದಣಿಯಾಗಲು ಯಾವ ದಾಖಲೆ ನೀಡಬೇಕು?

..........................................................................................................

..........................................................................................................

ಮತದಾನ ಯಾರ ಅವಕಾಶ?

..........................................................................................................

..........................................................................................................



ಪಾಠ 13

# ಐವರು ಪುಂಡರು ಹಾಗೂ ಗೌರಕ್ಕಳ ಕಥೆ

ಐ ಥ ಕ್ಕ ೌ





ಐ ಐದು ಐದಾರು ಐರಾವತ



ಥ ಥಳಥಳ ಕಥೆ ಅನಾಥ



ಕ್ಕ ಅಕ್ಕ ಮಕ್ಕಳು ಚಕ್ಕುಲಿ

ೌ ಸೌದೆ ನೌಕರಿ ಗೌರವ

ಪುಟ್ಟಣ್ಣ ರಾಮಕ್ಕ ನಗರಕ್ಕೆ ವಲಸೆ ಬಂದರು. ಅವರ ಮಗಳು ಗೌರಕ್ಕ. ಹದಿನಾರರ ಬಾಲೆ.

ಆ ದಂಪತಿಗಳು ವಕೀಲ ರಾಮನಾಥರ ಮನೆಗೆ ಬಂದರು. ಕೆಲಸಕ್ಕೆ ಸೇರಿದರು.

ಎಂದಿನಂತೆ ಪುಟ್ಟಣ್ಣ ರಾಮಕ್ಕ ಕೆಲಸಕ್ಕೆ ಹೋದರು. ಗೌರಕ್ಕ ಮನೆಯಲೇ ಉಳಿದಳು. ಮನೆಯಲೇ ಉಳಿದ ಗೌರಕ್ಕನ ಐವರು ಪುಂಡರು ಕಂಡರು. ಆ ಐವರು ಗೌರಕ್ಕಳಿಗೆ ಮಾನಸಿಕ ಹಿಂಸೆ ಕೊಟ್ಟರು. ಶಾರೀರಿಕ ಕಿರುಕುಳ ನೀಡಿದರು. ಐವರು ಪುಂಡರು ಪರಾರಿಯಾದರು.

ಪುಟ್ಟಣ್ಣ ರಾಮಕ್ಕ ಮನೆಗೆ ಮರಳಿದರು. ಅಳುವ ಗೌರಕ್ಕಳ ಕಂಡರು, ಹೌಹಾರಿದರು. ಥರಥರ ನಡಗುವ ಗೌರಕ್ಕಳ ವಿಚಾರಿಸಿದರು. ಗೌರಕ್ಕ ಅಳುತ ನಡೆದುದ ತಿಳಿಸಿದಳು. ಪುಟ್ಟಣ್ಣ ರಾಮಕ್ಕ ಕಂಗಾಲಾದರು.

ವಕೀಲ ರಾಮನಾಥರ ಬಳಿ ಬಂದರು. ನಡೆದ ಸಂಗತಿ ತಿಳಿಸಿದರು. ವಕೀಲರು ಸಮಾಲೋಚಕರನು ಕರೆಸಿದರು. ಅವರು ಗೌರಕ್ಕಳಿಗೆ ಸಲಹೆ ನೀಡಿ ಸಮಾಧಾನ ಮಾಡಿದರು.

ವಕೀಲರು ಸರಕಾರದ ಉಚಿತ ಕಾನೂನು ನೆರವಿನ ಕುರಿತು ತಿಳಿಸಿದರು. ಪುಟ್ಟಣ್ಣ ರಾಮಕ್ಕರಿಗೆ ಕಾನೂನಿನ ನೆರವು ಸಿಕ್ಕಿತು. ಐವರು ಪುಂಡರು ಸೆರೆಯಾದರು. ಅವರಿಗೆ ಸೆರೆವಾಸ ಆಯಿತು. ದಂಡ ಹಾಕಲಾಯಿತು.

ಕಾನೂನಿನ ಅರಿವು ಗೌರವದ ಬದುಕಿಗೆ ನೆರವು.

### ಇದನ್ನು ಕಲಿಸಿ.

ಕೆಲವು ಅಕ್ಷರಗಳ ಒತ್ತಕ್ಷರಗಳಿಗೆ ತಲೆಕಟ್ಟು ಹೋಗುತ್ತದೆ. ಅವು ಯಾವುವು ಎಂದರೆ ಕ್ಕ ಗ್ಗ ಚ್ಚ ಡ್ಡ ದ್ದ ಳ್ಳ
ಈ ಪಾಠದಲ್ಲಿ 'ಕ್ಕ' ಕಲಿಸಲಾಗಿದೆ. ಉಳಿದವುಗಳನ್ನು ಅದರಂತೆ ಕಲಿಸಿ.

| | | | | |
|---|---|---|---|---|
| ಗ್ಗ | ಚ್ಚ | ಡ್ಡ | ದ್ದ | ಳ್ಳ |
| ಹಗ್ಗ | ಮೆಚ್ಚು | ಅಡ್ಡ | ಹದ್ದು | ಹಳ್ಳ |

## ಲೆಕ್ಕಾಚಾರ

ಕೂಡುವಾಗ ಬಲಗಡೆ ಅಂಕಿಗಳಿಂದ ಪ್ರಾರಂಭ ಮಾಡಬೇಕು. ಹೀಗೆ ಕೂಡಿಸುವಾಗ ಮೊದಲನೆಯ ಅಂಕಿಯ ಮೊತ್ತ ಹತ್ತಕ್ಕಿಂತ ಹೆಚ್ಚು ಇದ್ದರೆ, ಮೊತ್ತವನ್ನು ಹತ್ತರ (ದಶಕದ) ಸ್ಥಾನಕ್ಕೆ ತೆಗೆದುಕೊಂಡು ಕೂಡಬೇಕು.

ಉದಾ: ಇಲ್ಲಿ 5 ಮತ್ತು 8 ಬಿಡಿ ಸ್ಥಾನದಲ್ಲಿರುವ ಅಂಕಿಗಳು. ಇವುಗಳನ್ನು ಕೂಡಿಸಿದಾಗ 13 ಆಗುತ್ತದೆ. ಇಲ್ಲಿ 3 ನ್ನು ಬಿಡಿ ಸ್ಥಾನದಲ್ಲಿ ಬರೆದು ಉಳಿದ 1ನ್ನು ದಶಕದ ಸ್ಥಾನಕ್ಕೆ ತೆಗೆದುಕೊಳ್ಳಬೇಕು. ದಶಕದ ಸ್ಥಾನದಲ್ಲಿರುವ 1 ಮತ್ತು 2ರ ಜೊತೆಗೆ ದಶಕದ ಸ್ಥಾನಕ್ಕೆ ತೆಗೆದುಕೊಂಡು 1ನ್ನು ಕೂಡಿಸಿದರೆ 4ನ್ನು ದಶಕದ ಸ್ಥಾನದಲ್ಲಿ ಬರೆಯಬೇಕು. ಆಗ ಒಟ್ಟು ಮೊತ್ತ 43 ಆಗುವುದು.

$$\begin{array}{r} 15 \\ +\ 28 \\ \hline 43 \\ \hline \end{array}$$

ಉದಾ: ಒಂದನೆಯ ಚಿತ್ರದಲ್ಲಿ 35 ಮಾವಿನಕಾಯಿಗಳು ಇವೆ. ಎರಡನೆಯ ಚಿತ್ರದಲ್ಲಿ 25 ಮಾವಿನಕಾಯಿಗಳು ಇವೆ. ಎರಡೂ ಚಿತ್ರಗಳಲ್ಲಿ ಇರುವ ಒಟ್ಟು ಮಾವಿನಕಾಯಿಗಳು ಎಷ್ಟು? ಎಂಬುದನ್ನು ದಶಕ ತೆಗೆದುಕೊಳ್ಳುವ ಮೂಲಕ ಲೆಕ್ಕ ಕಲಿಸಿ.



35 + 25 = 60

ಉದಾ: ಹರೀಶನ ಹತ್ತಿರ 69 ರೂಪಾಯಿಗಳಿವೆ. ಸೀತಾಳು 24 ರೂಪಾಯಿಗಳನ್ನು ಹರೀಶನಿಗೆ ನೀಡಿದಳು. ಹಾಗಾದರೆ ಈಗ ಹರೀಶನಲ್ಲಿ ಇರುವ ಒಟ್ಟು ಹಣವೆಷ್ಟು? ಎಂಬ ಎಣಿಕೆಯನ್ನು ವ್ಯವಹಾರದ ಮೂಲಕ ಕಲಿಸಿ.

# ಚಟುವಟಿಕೆ

1. ವೃತ್ತದಲ್ಲಿರುವ ಅಕ್ಷರವನ್ನು ಆಯಾ ಸಾಲಿನಲ್ಲಿ ಗುರುತಿಸಿ ವೃತ್ತ ಹಾಕಿಸಿ.

| | | | | | |
|---|---|---|---|---|---|
| (ಐ) | ಏ | ಐ | ಙ | ಎ | ಐ |
| (ಥ) | ಥ | ಧ | ಥ | ಢ | ಭ |
| (ಕ್ಕ) | ವ್ವ | ಕ್ಕ | ಬ್ಬ | ಕ್ಕ | ದ್ದ |
| (ಕೌ) | ತೌ | ರೌ | ಕೌ | ಭೌ | ಕೌ |

2. ಓದಿಸಿ.

| | | | | |
|---|---|---|---|---|
| ಸೌದೆ | ಗೌರಿ | ತೌಡು | ಸಕ್ಕರೆ | ಐನೂರು |
| ರಥ | ಕಥೆ | ಸೌಟು | ತಕ್ಕಡಿ | ಐವರು |
| ಪಾಠ | ಫಲ | ಊರು | ಕಛೇರಿ | ವಿಫಲ |

ಪುಟ್ಟಣ್ಣ ಗೌರಕ್ಕ ನಗರಕ್ಕೆ ವಲಸೆ ಬಂದರು
ಅಳುವ ಗೌರಕ್ಕಳನ್ನು ಕಂಡು ಹೌಹಾರಿದರು
ಕಾನೂನಿನ ಅರಿವು ಗೌರವದ ಬದುಕಿಗೆ ನೆರವು

3. ಬರೆಯಿಸಿ.

| | | | | |
|---|---|---|---|---|
| ಐ | .............. | .............. | .............. | .............. |
| ಥ | .............. | .............. | .............. | .............. |
| ಸೌ | .............. | .............. | .............. | .............. |
| ಕ್ಕ | .............. | .............. | .............. | .............. |

4. ಮಾದರಿಯಂತೆ ಕೊಟ್ಟಿರುವ ಒತ್ತಕ್ಷರಗಳನ್ನು ಕೆಳಗೆ ಬರೆಯಿಸಿ.

ವ್ವ ಗ್ಗ ಚ್ಚ ಡ್ಡ ದ್ದ ಳ್ಳ

ವ್ವ ಗ್ಗ ಚ್ಚ ಡ್ಡ ದ್ದ ಳ್ಳ

5. ಬರೆಯಿಸಿ.

ಗುಡ್ಡ ಹಗ್ಗ ಮೆಚ್ಚು ಹಳ್ಳ ಸುದ್ದಿ ಅವ್ವ

6 ವಾಕ್ಯದಲ್ಲಿ ಕೊಟ್ಟಿರುವ ಪದಗಳು ಹಿಂದು ಮುಂದಾಗಿವೆ. ಅವುಗಳನ್ನು ಸರಿಯಾಗಿ ಜೋಡಿಸಿ ವಾಕ್ಯ ಬರೆಯಿರಿ.

ಉದಾ: ನಡುಗುವ ಕಂಡು ಗೌರಕ್ಕಳ ಹೌಹಾರಿದರು ಥರಥರ

ಥರಥರ ನಡುಗುವ ಗೌರಕ್ಕಳ ಕಂಡು ಹೌಹಾರಿದರು

ಕಂಡರು ಉಳಿದ ಮನೆಯಲೇ ಐವರು ಗೌರಕ್ಕನ ಮುಂಡರು

ಬಂದರು ವಕೀಲ ಬಳಿ ರಾಮನಾಥರ

ನೀಡಿ ಮಾಡಿದರು ಸಲಹೆ ಸಮಾಧಾನ ಗೌರಕ್ಕನಿಗೆ

..........................................................................................

..........................................................................................

**7. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿಸಿ.**

ಪುಟ್ಟಣ್ಣ, ರಾಮಕ್ಕ ಯಾರ ಮನೆಗೆ ಬಂದರು?

..........................................................................................

..........................................................................................

ಐವರು ಪುಂಡರು ಏನು ಮಾಡಿದರು?

..........................................................................................

..........................................................................................

ಐವರು ಪುಂಡರಿಗೆ ಏನಾಯಿತು?

..........................................................................................

..........................................................................................

**8. ಕೂಡುವ ಲೆಕ್ಕ ಮಾಡಿಸಿ.**

ಮೊದಲ ಚಿತ್ರದಲ್ಲಿ 16 ಸೇಬು ಹಣ್ಣುಗಳಿವೆ. ಎರಡನೆಯ ಚಿತ್ರದಲ್ಲಿ 15 ಸೇಬು ಹಣ್ಣುಗಳಿವೆ. ಎರಡನ್ನೂ ಕೂಡಿಸಿದರೆ ಒಟ್ಟು ಎಷ್ಟು ಸೇಬು ಹಣ್ಣುಗಳು ಆಗುತ್ತವೆ? ಬರೆಯಿಸಿ.





**16 + 15 = ______**

9. ರಂಗನ ಬಳಿ 36 ರೂಪಾಯಿಗಳು ಇವೆ. ರಾಮ ರಂಗನಿಗೆ 25 ರೂಪಾಯಿಗಳನ್ನು ಕೊಟ್ಟನು. ಹಾಗಾದರೆ ರಂಗನ ಹತ್ತಿರ ಇರುವ ಒಟ್ಟು ಹಣ ಎಷ್ಟು?

10. ಕಲಾಳ ಹತ್ತಿರ 3 ಬುಟ್ಟಿಗಳಿವೆ. ಪ್ರತೀ ಬುಟ್ಟಿಯಲ್ಲಿಯೂ 21 ಹಣ್ಣುಗಳನ್ನು ತುಂಬಿದ್ದಾಳೆ. ಹಾಗಾದರೆ 3 ಬುಟ್ಟಿಗಳಲ್ಲಿರುವ ಒಟ್ಟು ಹಣ್ಣುಗಳೆಷ್ಟು?



# ಪಾಠ 14 ಮನಸ್ಸು ಇದ್ದರೆ ಮನೆಗೊಂದು ಶೌಚಾಲಯ

ಸ್ಸ ಇ ೊ




| | | | | |
|---|---|---|---|---|
|  | ಸ್ಸ | ಬಸ್ಸು | ವಯಸ್ಸು | ಮನಸ್ಸು |
|  | ಇ | ಇಲಿ | ಇವಳು | ಇರುವೆ |
| | ೊ | ನೊಣ | ಹೊಲ | ಕೊಳವೆ |

ಮನೆಗೆ ಒಂದು ಶೌಚಾಲಯ ಇರಬೇಕು. ಸರಕಾರ ಶೌಚಾಲಯ ಯೋಜನೆ ತಂದಿದೆ. ಮನೆ ಮನೆಗೂ ನೀರಿನ ಅನುಕೂಲ ಇದೆ. ಆದರೂ ಕೆಲ ಜನ ಶೌಚಕ್ಕೆ ಬಯಲಿಗೆ ಹೋಗುವರು. ಹೊಲ ಗದ್ದೆಗಳಲ್ಲಿ ಶೌಚ ಮಾಡುವರು.

ಗಿಡ ಗಂಟೆಗಳ ಮರೆಗೆ ಹೋಗುವರು. ದಾರಿಯ ಬದಿಯೂ ಕೂರುವರು. ಇದರಿಂದ ಮನಸ್ಸಿಗೆ ಮುಜುಗರ, ಹಿಂಸೆ ಆಗುವುದು. ವಿಷಜಂತುಗಳ ಹಾವಳಿಗೆ ಸಿಲುಕುವರು.

ಬಯಲು ಶೌಚವು ಹೊಲಸು ಹರಡುವುದು. ಮಳೆ ಬಂದಾಗ ಹೊಲಸು ನೀರು ಕೆರೆ ಬಾವಿ ಸೇರುವುದು. ಇದರಿಂದ ಕೊಳಕು ವಾಸನೆ ಬರುವುದು. ಅಕ್ಕಪಕ್ಕದ ಪರಿಸರ ಕೆಡುವುದು. ನೊಣಗಳು ಹೆಚ್ಚಾಗುವವು. ರೋಗಗಳು ಹರಡುವವು.

ಆದ್ದರಿಂದ ಜನರು ಬಯಲು ಶೌಚ ಬಿಡಬೇಕು. ಶೌಚಾಲಯ ಕಟ್ಟಿಸಿ ಬಳಸಲೇಬೇಕು. ಮನೆಗೆ ಶೌಚಾಲಯ ಕಡ್ಡಾಯವಾಗಿ ಇರಲೇಬೇಕು.

ಐದಾರು ಮಾದರಿಯ ಶೌಚಾಲಯಗಳು ಇವೆ. ಅಗ್ಗದ ಶೌಚಾಲಯಗಳು ಇವೆ. ನಗರಗಳಲ್ಲಿ ಸಂಚಾರಿ ಶೌಚಾಲಯಗಳು ಇವೆ. ನಮಗೆ ಬೇಕಾದ ಮಾದರಿಯ ಶೌಚಾಲಯ ಕಟ್ಟಿಸೋಣ. ಇದಕ್ಕೆ ಸರಕಾರ ಧನ ಸಹಾಯ ಮಾಡುವುದು. ಶೌಚಾಲಯವನ್ನು ಶುಚಿಯಾಗಿ ಇಡೋಣ. ರೋಗಗಳಿಂದ ದೂರ ಉಳಿಯೋಣ. ಶೌಚಾಲಯ ಕಟ್ಟಿಸೋಣ. ಆಯುಸ್ಸು ಹೆಚ್ಚಿಸೋಣ. ಬಯಲು ಶೌಚ ರಹಿತ ಊರು, ಶುಚಿಯಾದ ಊರು.

### ಇದನ್ನು ಕಲಿಸಿ.

ಕೆಲವು ಅಕ್ಷರಗಳ ಒತ್ತಕ್ಷರಗಳು ತಲೆಕಟ್ಟಿನ ಜೊತೆಗೆ ಬಿಂದುವನ್ನು ಕಳೆದು ಕೊಳ್ಳುತ್ತವೆ. ಅವುಗಳಲ್ಲಿ 'ಸ್ಸ' ಮತ್ತು 'ಪ್ಪ' ಗಳು ಹೆಚ್ಚು ಬಳಕೆಯಲ್ಲಿವೆ. 'ಸ್ಸ' ಒತ್ತಕ್ಷರವನ್ನು ಈ ಪಾಠದಲ್ಲಿ ಕಲಿಸಲಾಗಿದೆ. ಅದರಂತೆ 'ಪ್ಪ' ಒತ್ತಕ್ಷರವನ್ನು ಇಲ್ಲಿ ಕಲಿಸಿ.

**ಪ್ಪ** ಅಪ್ಪ ತುಪ್ಪ ಹಪ್ಪಳ ಕೊಪ್ಪಳ

# ಲೆಕ್ಕಾಚಾರ

**ಒಂದನೆಯ ಚಿತ್ರದಲ್ಲಿ 25 ಬುಗುರಿಗಳು ಇದ್ದವು. ಎರಡನೆಯ ಚಿತ್ರದಲ್ಲಿ 16 ಬುಗುರಿಗಳನ್ನು ಹಾಕಿದರು. ಒಂದನೆಯ ಚಿತ್ರದಲ್ಲಿ ಉಳಿದ ಬುಗುರಿಗಳು ಎಷ್ಟು? ದಶಕ ತೆಗೆದು ಕಳೆಯುವ ಲೆಕ್ಕ ಕಲಿಸಿ**



$$\begin{array}{r} 25 \\ -\ 16 \\ \hline 09 \\ \hline \end{array}$$

ಕಳೆಯುವಾಗ ಕೊಟ್ಟಿರುವ ಸಂಖ್ಯೆಗಳಲ್ಲಿಯಾವುದು ದೊಡ್ಡ ಸಂಖ್ಯೆ ಇದೆಯೋ ಅದನ್ನು ಮೊದಲು ಬರೆದುಕೊಂಡು ನಂತರ ಸಂಖ್ಯೆಗಳನ್ನು ಅಂಕಿಗಳ ಸ್ಥಾನಬೆಲೆಗೆ ಅನುಗುಣವಾಗಿ ಬರೆದುಕೊಳ್ಳುವುದು.

ಇಲ್ಲಿ 5 ಮತ್ತು 6 ಬಿಡಿಸ್ಥಾನದಲ್ಲಿರುವ ಅಂಕಿಗಳು. ಮೊದಲ ಸಂಖ್ಯೆಯ ಬಿಡಿ ಸ್ಥಾನದಲ್ಲಿರುವ 5 ಎರಡನೇ ಸಂಖ್ಯೆಯ ಬಿಡಿಸ್ಥಾನದಲ್ಲಿರುವ 6 ಕ್ಕಿಂತ ಕಡಿಮೆ ಇದೆ. ಇಲ್ಲಿ ಅಂಕಿ 5 ರಲ್ಲಿ 6 ನ್ನು ಕಳೆಯಲು ಸಾಧ್ಯವಾಗುವುದಿಲ್ಲ. ಆಗ ನಾವು ಹತ್ತರ ಸ್ಥಾನದಲ್ಲಿರುವ 2 ಹತ್ತುಗಳಿಂದ ಒಂದು ಹತ್ತನ್ನು ಬಿಡಿಸ್ಥಾನಕ್ಕೆ ತರಬೇಕು. ಆಗ ಬಿಡಿಸ್ಥಾನದಲ್ಲಿ 5+10=15 ಆಗುವುದು. ಮತ್ತು ಹತ್ತರ ಸ್ಥಾನದಲ್ಲಿ ಒಂದು ಹತ್ತು ಉಳಿಯುವುದು. ಈಗ 15 ರಿಂದ 6 ನ್ನು ಕಳೆಯಬೇಕು. ಬರುವ 9 ಉತ್ತರವನ್ನು ಬಿಡಿಸ್ಥಾನದಲ್ಲೇ ಬರೆಯುವುದು. ಹತ್ತರ ಸ್ಥಾನದಲ್ಲಿರುವ 1 ರಿಂದ 1ನ್ನು ಕಳೆದರೆ ಸೊನ್ನೆ ಉಳಿಯುವುದು. ಇದೇ ರೀತಿಯಾಗಿ ಕೆಳಗಿನ ದಶಕ ತೆಗೆದು ಕಳೆಯುವ ಲೆಕ್ಕ ಕಲಿಸಿ.

| ಹತ್ತು | ಬಿಡಿ |
|---|---|
| 2 | 5 |
| –1 | 6 |
| 0 | 9 |

**ಕಳೆಯುವ ಲೆಕ್ಕ ಮಾಡಿಸಿ.**

$$\begin{array}{r} 48 \\ -\ 19 \\ \hline 29 \\ \hline \end{array} \qquad \begin{array}{r} 85 \\ -\ 26 \\ \hline 59 \\ \hline \end{array} \qquad \begin{array}{r} 94 \\ -\ 28 \\ \hline 66 \\ \hline \end{array} \qquad \begin{array}{r} 77 \\ -\ 39 \\ \hline 38 \\ \hline \end{array}$$

# ಚಟುವಟಿಕೆ

**1. ವೃತ್ತದಲ್ಲಿರುವ ಅಕ್ಷರವನ್ನು ಆಯಾ ಸಾಲಿನಲ್ಲಿ ಗುರುತಿಸಿ ವೃತ್ತ ಹಾಕಿಸಿ.**

(ಇ) ಒ ಇ ಐ ಇ ಎ

(ಕೊ) ಕೊ ಕೂ ಕೊ ರೊ ಝೊ

(ಪ್ಪ) ಣ್ಣ ಪ್ಪ ವ್ವ ಪ್ಪ ದ್ದ

(ಸ್ಸ) ಸ್ಸ ಖ್ಖ ದ್ದ ಸ್ಸ ಳ್ಳ

**2. ಓದಿಸಿ.**

ಕೊಡ ಬಸ್ಸು ತುಪ್ಪ ಹೊಲ ಅವ್ವ ಯಶಸ್ಸು

ಕಥೆ ಠಸ್ಸೆ ಅಪ್ಪ ಇಲಿ ತಪ್ಪು ಇರುವೆ

ಊಟಕ್ಕೆ ಉಪ್ಪಿನಕಾಯಿ

ಮನಸ್ಸು ಮಾಡಿದರೆ ಕೆಲಸ ಸುಲಭ

ಮನೆಗೊಂದು ಶೌಚಾಲಯ ಇದ್ದರೆ ಒಳ್ಳೆಯದು

**3. ಬರೆಯಿಸಿ.**

ಇ .................. .................. .................. ..................
.................. .................. .................. ..................

ಪ್ಪ .................. .................. .................. ..................
.................. .................. .................. ..................

ನೊ .................. .................. .................. ..................
.................. .................. .................. ..................

ಸ್ಸ .................. .................. .................. ..................
.................. .................. .................. ..................

ಇಬ್ಬರು .................. .................. .................. ..................
.................. .................. .................. ..................

ತಪಸ್ಸು .................. .................. .................. ..................
.................. .................. .................. ..................

ತುಪ್ಪ .................. .................. .................. ..................
.................. .................. .................. ..................

ಹೊಲ .................. .................. .................. ..................
.................. .................. .................. ..................

ಮನೆ ಮನೆಗೂ ನೀರಿನ ಅನುಕೂಲ ಇದೆ

..........................................................................................

..........................................................................................

ಶೌಚಾಲಯ ಬಳಸಲು ಮನಸ್ಸು ಮಾಡಬೇಕು

..........................................................................................

..........................................................................................

4. ಆವರಣದಲ್ಲಿರುವ ಪದಗಳಲ್ಲಿ ಸರಿಯಾದ ಪದ ಆಯ್ಕೆ ಮಾಡಿ ಬಿಟ್ಟ ಸ್ಥಳ ತುಂಬಿಸಿ.

(ಗದ್ದೆ ರೋಗ ಯೋಜನೆ)

ಹೊಲ ________ ಗಳಲಿ ಶೌಚ ಮಾಡುವರು

ಸರಕಾರವು ಶೌಚಾಲಯ ________ ತಂದಿದೆ

ಶೌಚಾಲಯ ಬಳಸೋಣ, ________ ತಡೆಯೋಣ

**5. ಕೊಟ್ಟಿರುವ ಪದಗಳನ್ನು ಬಳಸಿಕೊಂಡು ವಾಕ್ಯದಲ್ಲಿ ಬರೆಯಿಸಿ.**

ಹೊಲ : ..........................................................................................
..........................................................................................

ಐದು : ..........................................................................................
..........................................................................................

ಛಲ : ..........................................................................................
..........................................................................................

ಮನಸ್ಸು : ..........................................................................................
..........................................................................................

**6. ಕೆಳಗಿನ ಚಿತ್ರದಲ್ಲಿರುವ ವಸ್ತುಗಳನ್ನು ಗುರುತಿಸಿ ಅವುಗಳ ಹೆಸರನ್ನು ಬರೆಯಲು ತಿಳಿಸಿ.**



..........................................................................................
..........................................................................................
..........................................................................................
..........................................................................................
..........................................................................................
..........................................................................................
..........................................................................................
..........................................................................................

7. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿಸಿ.

ಬಯಲು ಶೌಚದಿಂದ ಏನು ಆಗುವುದು?

..........................................................................................................

..........................................................................................................

ಮನಸ್ಸು ಇದ್ದರೆ ಏನು ಮಾಡಬಹುದು?

..........................................................................................................

..........................................................................................................

ರೋಗಗಳಿಂದ ದೂರ ಉಳಿಯಲು ನಾವೇನು ಮಾಡಬೇಕು?

..........................................................................................................

..........................................................................................................

8. ಮೊದಲನೇ ವೃತ್ತದಲ್ಲಿ 24 ಚೆಂಡುಗಳು ಇದ್ದವು. 2ನೇ ವೃತ್ತಕ್ಕೆ 17 ಚೆಂಡುಗಳು ಉರುಳಿ ಹೋದವು. ಹಾಗಾದರೆ ಮೊದಲನೆ ವೃತ್ತದಲ್ಲಿ ಉಳಿದ ಚೆಂಡುಗಳು ಎಷ್ಟು?



$$\begin{array}{r} 34 \\ -\ 15 \\ \hline \\ \hline \end{array} \quad \begin{array}{r} 45 \\ -\ 26 \\ \hline \\ \hline \end{array} \quad \begin{array}{r} 53 \\ -\ 17 \\ \hline \\ \hline \end{array} \quad \begin{array}{r} 67 \\ -\ 59 \\ \hline \\ \hline \end{array} \quad \begin{array}{r} 75 \\ -\ 16 \\ \hline \\ \hline \end{array} \quad \begin{array}{r} 84 \\ -\ 28 \\ \hline \\ \hline \end{array}$$

ಪಾಠ 15

# ಚಿನ್ನಕ್ಕಳ ಸಂತೋಷದ ಔತಣ

ನ್ನ ಔ ಷ








| | | | |
|---|---|---|---|
| ನ್ನ | ಅನ್ನ | ಕನ್ನಡಿ | ಬೆನ್ನು |
| ಔ | ಔಷಧ | ಔತಣ | ಔಡಲ |
| ಷ | ವಿಷ | ಕಷಾಯ | ವಿಶೇಷ |

ಚಿನ್ನಕ್ಕ ಹಳ್ಳಿಯಲಿ ಹುಟ್ಟಿ ಬೆಳೆದವಳು. ಅವಳ ಮಗ ಸಂತೋಷ ಚೆನ್ನಾಗಿ ಓದಿದವನು. ಸಂತೋಷನಿಗೆ ನಗರದ ಔಷಧಾಲಯದಲಿ ಕೆಲಸ.

ಮಗನನ್ನು ನೋಡಲು ಚಿನ್ನಕ್ಕ ನಗರಕ್ಕೆ ಬಂದಳು. ಅಂಚೆ ಕಚೇರಿಯ ಪಕ್ಕದಲ್ಲಿ ಸಂತೋಷನ ಮನೆ. ಚಿನ್ನಕ್ಕ ಅಂಚೆ ಕಚೇರಿಗೆ ಜನ ಬರುವುದನ್ನು ನೋಡಿದಳು. ಅವಳಿಗೆ ಕುತೂಹಲ ಮೂಡಿತು. ಉಷಾ ಚಿನ್ನಕ್ಕನ ಗೆಳತಿ. ಪಕ್ಕದ ಅಂಚೆ ಕಚೇರಿಯಲಿ ಅವಳಿಗೆ ನೌಕರಿ. ಅಂಚೆ ಕಚೇರಿ ಬಗ್ಗೆ ಉಷಾಳನ್ನು ಕೇಳಿದಳು. ಉಷಾ ಅಂಚೆ ಕಚೇರಿ ಸೇವೆಗಳ ಬಗ್ಗೆ ತಿಳಿಸಿದಳು. ಉಳಿತಾಯ ಮಾಡುವ ದಾರಿಗಳ ಬಗ್ಗೆ ಹೇಳಿದಳು. ಖಾತೆಯಲಿ ಹಣ ಇಟ್ಟರೆ ಬಡ್ಡಿ ಬರುವುದು, ಹಣ ಬೆಳೆಯುವುದು. ಯಾರೂ ಕದಿಯಲಾರರು ಎಂದಳು. ಚಿನ್ನಕ್ಕನಿಗೆ ಸರಿ ಅನಿಸಿತು.

ಚಿನ್ನಕ್ಕ ಮನೆಗೆ ಬಂದಳು. ಮಗನಿಗೆ ಉಳಿತಾಯ ಕುರಿತು ಹೇಳಿದಳು. ಮರುದಿನ ಚಿನ್ನಕ್ಕ ಸಂತೋಷನೊಂದಿಗೆ ಅಂಚೆ ಕಚೇರಿಗೆ ಹೋದಳು. ಇಬ್ಬರೂ ಉಳಿತಾಯ ಖಾತೆಗಳನ್ನು ತೆರೆದರು. ಹಣ ಉಳಿಸತೊಡಗಿದರು. ಅವಳು ಈಗ ಎ.ಟಿ.ಎಂ. ನಿಂದ ಹಣ ಪಡೆಯುವಳು. ಮಗನಿಂದ ಅಂಚೆ ವಿಮೆ ಮಾಡಿಸಿದಳು. ಈಗ ಚಿನ್ನಕ್ಕನಿಗೆ ಬಹಳ ಸಂತೋಷ ಆಗಿದೆ.

ಅಂಚೆ ಕಚೇರಿಯಿಂದ ಚಿನ್ನಕ್ಕ ಬದಲಾದಳು. ಉಳಿತಾಯದ ಮಹಿಮೆ ಅರಿತಳು. ಇತರೆ ಹಣಕಾಸು ವಹಿವಾಟುಗಳ ಬಗ್ಗೆ ತಿಳಿದುಕೊಂಡಳು. ಇತರರಿಗೂ ಉಳಿತಾಯದ ಅರಿವು ಮೂಡಿಸಿದಳು.

ಚಿನ್ನಕ್ಕ ಉಳಿತಾಯದ ಹಣದಿಂದ ಮನೆ ಕಟ್ಟಿಸಿದಳು. ನೆರೆಹೊರೆ, ಬಂಧು ಬಳಗದವರಿಗೆ ಔತಣ ನೀಡಿದಳು.

# ಲೆಕ್ಕಾಚಾರ

**ನಾಣ್ಯ ಮತ್ತು ನೋಟುಗಳನ್ನು ಪರಿಚಯಿಸಿ ಕೂಡುವುದನ್ನು ಕಲಿಸಿ.**



= 3 ರೂಪಾಯಿ



= 6 ರೂಪಾಯಿ



= 10 ರೂಪಾಯಿ



= 15 ರೂಪಾಯಿ



= 510 ರೂಪಾಯಿ



= 720 ರೂಪಾಯಿ

# ದೈನಂದಿನ ವ್ಯವಹಾರದ ಕೆಲವು ಅರ್ಜಿ ನಮೂನೆಗಳು

ಇಲ್ಲಿ ಕೆಲವು ಮಾದರಿ ಅರ್ಜಿ ನಮೂನೆಗಳನ್ನು ಕೊಡಲಾಗಿದೆ. ಇವು ನಿಮ್ಮ ದೈನಂದಿನ ವ್ಯವಹಾರಕ್ಕೆ ಅಗತ್ಯ.

## ಹಣ ಜಮಾ ಮಾಡುವ ಮಾದರಿ ನಮೂನೆ









## ಚಟುವಟಿಕೆ

1. ವೃತ್ತದಲ್ಲಿರುವ ಅಕ್ಷರವನ್ನು ಆಯಾ ಸಾಲಿನಲ್ಲಿ ಗುರುತಿಸಿ ವೃತ್ತ ಹಾಕಿಸಿ.

| | | | | | |
|---|---|---|---|---|---|
| (ನ್ನ) | ನ್ನ | ಸ್ಸ | ನ್ನ | ನ್ನೆ | ಸ್ಸ |
| (ಔ) | ಜೌ | ಔ | ಬೌ | ಔ | ಓ |
| (ಷ) | ಪ | ಫ | ಷ | ಛ | ಷ |

2. ಓದಿಸಿ.

| | | | |
|---|---|---|---|
| ಔತಣ | ಇದು | ಕಥೆ | ಔಷಧ |
| ವಿಶೇಷ | ಊಟ | ರಥ | ವಿಷಯ |
| ಸೌರಭ | ಕನ್ನಡಿ | ಮನ್ನಣೆ | ಕಛೇರಿ |

ಚಿನ್ನಕ್ಕ ನಗರಕ್ಕೆ ಬಂದಳು

ಉಷಾ ಚಿನ್ನಕ್ಕಳ ಗೆಳತಿ

ಸಂತೋಷನಿಗೆ ನಗರದ ಔಷಧಾಲಯದಲಿ ಕೆಲಸ

3. ಬರೆಯಿಸಿ.

| | | | | |
|---|---|---|---|---|
| ನ್ನ | .............. | .............. | .............. | .............. |
| | .............. | .............. | .............. | .............. |
| ಔ | .............. | .............. | .............. | .............. |
| | .............. | .............. | .............. | .............. |
| ಷ | .............. | .............. | .............. | .............. |
| | .............. | .............. | .............. | .............. |

| ಕನ್ನಡ | ಔಷಧ | ವಿಷಯ | ಐವರು |
|---|---|---|---|
| .................... | .................... | .................... | .................... |
| .................... | .................... | .................... | .................... |

ಸಂತೋಷನಿಗೆ ನಗರದ ಔಷಧಾಲಯದಲಿ ಕೆಲಸ

..................................................................................................

..................................................................................................

ಉಷಾ ಚಿನ್ನಕ್ಕನ ಗೆಳತಿ

..................................................................................................

..................................................................................................

ಚಿನ್ನಕ್ಕ ಸಂತೋಷ ಉಳಿತಾಯ ಖಾತೆ ತೆರೆದರು

..................................................................................................

..................................................................................................

ಬಂಧು ಬಳಗಕ್ಕೆ ಔತಣ ನೀಡಿದಳು

..................................................................................................

..................................................................................................

**4. ಕೊಟ್ಟಿರುವ ಅಕ್ಷರಗಳಿಗೆ ಉದಾಹರಣೆಯಂತೆ ಸ್ವರಚಿಹ್ನೆಗಳನ್ನು ಸೇರಿಸಿ ಬರೆಯಿಸಿ.**

| | ◌ೂ | ◌ೋ | ◌ೌ |
|---|---|---|---|
| ಮ | ಮೂ | ಮೋ | ಮೌ |
| ರ | | | |
| ಬ | | | |
| ಗ | | | |
| ಡ | | | |
| ಹ | | | |
| ಪ | | | |

**5. ಒಂದು ವಾಕ್ಯದಲ್ಲಿ ಉತ್ತರ ಬರೆಯಿಸಿ.**

ಚಿನ್ನಕ್ಕ ನಗರಕ್ಕೆ ಏಕೆ ಬಂದಳು?

..................................................................................................

..................................................................................................

ಚಿನ್ನಕ್ಕ ಯಾವ ಖಾತೆ ತೆರೆದಳು?

.....................................................................................................

.....................................................................................................

ಚಿನ್ನಕ್ಕ ಉಳಿತಾಯ ಹಣದಿಂದ ಏನು ಮಾಡಿದಳು?

.....................................................................................................

.....................................................................................................

**6. ಕೊಟ್ಟಿರುವ ನಾಣ್ಯ ಹಾಗೂ ನೋಟುಗಳನ್ನು ಕೂಡಿಸಿ ಮುಂದೆ ಬರೆಯಿಸಿ.**



+


= ..................
..................



+


= ..................
..................



+


= ..................
..................

**7. ಈ ಕೆಳಗಿನ ವಸ್ತುಗಳನ್ನು ಖರೀದಿಸಲು ನೀವು ಎಷ್ಟು ಹಣವನ್ನು ನೀಡುವಿರೆಂದು ಹೊಂದಿಸಿ.**

| ವಸ್ತು / ಪದಾರ್ಥ | ಬೆಲೆ / ಹಣ |
|---|---|
| 1)ಬೆಲ್ಲ – 90 ರೂ |  |
| 2)ಹೊದಿಕೆ – 350 ರೂ |  |
| 3)ಹಾಲು – 45 ರೂ |  |
| 4)ಸೊಪ್ಪು – 18 ರೂ |  |

8. ಚಿನ್ನಕ್ಕ ಹಾಸನದ ಬ್ಯಾಂಕಿನಲ್ಲಿ ಒಂದು ಉಳಿತಾಯ ಖಾತೆಯನ್ನು ಹೊಂದಿದ್ದಾಳೆ. ಖಾತೆಯ ಸಂಖ್ಯೆ 30004116528 ಆಗಿದೆ. ಇವಳು ತನ್ನ ಖಾತೆಗೆ 3000/– ( ಮೂರು ಸಾವಿರ ) ರೂಪಾಯಿಗಳನ್ನು ಜಮಾ ಮಾಡಲು ಹಣ ಜಮಾ ಅರ್ಜಿ ಭರ್ತಿ ಮಾಡಬೇಕಿದೆ. ತಾವು ಚಿನ್ನಕ್ಕಳಿಗೆ ಹಣ ಜಮಾ ಅರ್ಜಿ ಭರ್ತಿ ಮಾಡಲು ಸಹಕರಿಸಿ.

## ಹಣ ಜಮಾ ಮಾಡುವ ಮಾದರಿ ಅರ್ಜಿ



9. ಶಂಕರಪ್ಪ ಹಾಸನದ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿದ್ದಾರೆ. ಅವರಿಗೆ ತಮ್ಮ ಖಾತೆಯಿಂದ 2000/– ರೂಪಾಯಿಗಳನ್ನು ಹಿಂಪಡೆಯಬೇಕಿದೆ. ಅದಕ್ಕಾಗಿ ಬ್ಯಾಂಕು ನೀಡಿರುವ ಚೆಕ್ ಭರ್ತಿ ಮಾಡಬೇಕಿದೆ. ನೀವು ಶಂಕರಪ್ಪನಿಗೆ ಹಣ ಹಿಂದಕ್ಕೆ ಪಡೆಯುವ ಚೆಕ್ ತುಂಬಲು ಸಹಕರಿಸಿ.

## ಹಣ ಹಿಂದಕ್ಕೆ ಪಡೆಯುವ ಮಾದರಿ ಚೆಕ್



ಪಾಠ 16

# ಮಲ್ಲಯ್ಯನೂ, ಅವನ ಮೂಢನಂಬಿಕೆಯೂ!

ಲ್ಲ ಯ್ಯ ಢ







| | | | |
|---|---|---|---|
| ಲ್ಲ | ಬೆಲ್ಲ | ಹುಲ್ಲು | ಮಲ್ಲಿಗೆ |
| ಯ್ಯ | ಅಯ್ಯ | ಮುಯ್ಯಿ | ಉಯ್ಯಾಲೆ |
| ಢ | ಢಕ್ಕೆ | ರೂಢಿ | ಮೂಢ |

ಮಲ್ಲಯ್ಯ ಕಾನೂರಿನವನು. ಮಲ್ಲಯ್ಯನ ಹೆಂಡತಿ ತಾರಿಣಿ. ತಾರಿಣಿಗೆ ಹೆರಿಗೆ ಆಯಿತು. ಅವರ ಮನೆಯ ರೂಢಿಯಂತೆ ಬಾಣಂತಿಯನ್ನು ಊರ ಹೊರಗೆ ಗುಡಿಸಲಿನಲ್ಲಿ ಇರಿಸಲಾಯಿತು.

ಸರಕಾರಿ ದಾದಿಯರು ವಾಡಿಕೆಯಂತೆ ಮನೆ ಮನೆ ಭೇಟಿಗೆ ಬಂದರು. ಬಾಣಂತಿಯನ್ನು ಊರ ಹೊರಗೆ ಇರಿಸಿರುವುದ ತಿಳಿದರು. ಗಾಬರಿ ಆದರು. ಕೂಡಲೇ ಮಲ್ಲಯ್ಯನನ್ನು ಕಂಡರು. ಮಲ್ಲಯ್ಯನಿಗೆ ಇದು ಮೂಢನಂಬಿಕೆ ಎಂದು ತಿಳಿಸಿದರು. ತಾಯಿ ಮಗುವನ್ನು ಉಪಚರಿಸುವ ಬಗ್ಗೆ ತಿಳಿಸಿದರು. ಮಲ್ಲಯ್ಯನಿಗೆ ತಪ್ಪಿನ ಅರಿವಾಯಿತು. ಹೆಂಡತಿ ಮಗುವನ್ನು ಮನೆಗೆ ಕರೆತಂದನು. ಸರಿಯಾಗಿ ನೋಡಿಕೊಂಡನು.

ರಾಮಯ್ಯ ಮಲ್ಲಯ್ಯನ ಗೆಳೆಯ. ರಾಮಯ್ಯನ ಮಗ ಕಿರಣ ಓದುವ ಬಾಲಕ. ಒಂದು ದಿನ ಆಟ ಆಡುವಾಗ ಕಿರಣ ಕುಸಿದು ಬಿದ್ದ. ಆಗಾಗ ಶಾಲೆಯಲ್ಲಿಯೂ ಕುಸಿದು ಬೀಳುತ್ತಿದ್ದ. ಇದು ರಾಮಯ್ಯನಿಗೆ ತಿಳಿದು ಗುಡಿಗೆ ಹೋದ. ಗುಡಿಯ ಗುಡ್ಡಪ್ಪನನ್ನು ಕಂಡ. ಹುಡುಗನಿಗೆ ದೇವರ ಅವಾಹನೆ ಯಾಗಿದೆ ಎಂದ. ರಾಮಯ್ಯ ಕಿರಣನಿಗೆ ಶಾಲೆ ಬಿಡಿಸಿದ. ದೇವರಿಗೆ ಕಿರಣ ಮೀಸಲು ಎಂದ. ಗುರುಗಳು ಮನೆಗೆ ಬಂದರು. ಶಾಲೆ ಬಿಡಿಸಿದ ಕಾರಣ ಅರಿತರು. ರಾಮಯ್ಯನಿಗೆ ಇದು ಮೂಢ ನಂಬಿಕೆ ಎಂದು ತಿಳಿಸಿದರು. ದವಾಖಾನೆಗೆ ಹೋಗಲು ಹೇಳಿದರು. ಊರ ಜನಕ್ಕೆ ಮೂಢನಂಬಿಕೆ ಬಗೆಗೆ ಅರಿವು ಮೂಡಿಸಿದರು. ದವಾಖಾನೆಯಲ್ಲಿ ತಪಾಸಣೆ ಮಾಡಿಸಿದರು. ಸಮತೋಲನ ಆಹಾರ ನೀಡಲು ತಿಳಿಸಿದರು. ಔಷಧೋಪಚಾರ ಮಾಡಿ ಕಳುಹಿಸಿದರು. ಕಿರಣ ಚೇತರಿಸಿಕೊಂಡ. ಶಾಲೆಗೆ ಹೊರಟ.

ಮಲ್ಲಯ್ಯ ಮತ್ತು ಊರಿನ ಜನ ನಿಜವನ್ನು ತಿಳಿದರು. ಕೂದಲು ಗಂಟು ಕಟ್ಟುವುದು, ಬಾಣಂತಿಯನ್ನು ಊರ

ಹೊರಗಿಡುವುದು, ದೇವರ ಅವಾಹನೆ, ದೆವ್ವ ಇವೆಲ್ಲಾ ಸುಳ್ಳು ಎಂದು ತಿಳಿದರು. ಮೂಢನಂಬಿಕೆ ಬಿಡಬೇಕು. ತಿಳುವಳಿಕೆ ಪಡೆದು ಬದುಕಬೇಕು. ಸುಖವಾದ ಜೀವನಕ್ಕೆ ಸರಿಯಾದ ತಿಳುವಳಿಕೆ ಬೇಕು ಎಂದು ಅರಿತರು.

ಇದನ್ನು ಕಲಿಸಿ.

**ಋ** – ಋತು ಋಷಿ ಋಣ

## ಲೆಕ್ಕಾಚಾರ

1. ಈ ಕೆಳಗಿನ ಅಳತೆ ಮಾಪಕಗಳನ್ನು ಪರಿಚಯಿಸಿ ಕೊಡಿ.




ಒಂದು ಲೀಟರಿಗೆ 1000 ಮಿಲಿ ಲೀಟರು
ಮುಕ್ಕಾಲು ಲೀಟರಿಗೆ 750 ಮಿಲಿ ಲೀಟರು
ಅರ್ಧ ಲೀಟರಿಗೆ 500 ಮಿಲಿ ಲೀಟರು
ಕಾಲು ಲೀಟರಿಗೆ 250 ಮಿಲಿ ಲೀಟರು

2. ಅಳತೆಯ ಕೂಡುವ ಲೆಕ್ಕವನ್ನು ಕಲಿಸಿ.

100 ಮಿ.ಲೀ. + 50 ಮಿ.ಲೀ. = 150 ಮಿ.ಲೀ.

200 ಮಿ.ಲೀ. + 100 ಮಿ.ಲೀ. = 300 ಮಿ.ಲೀ.

200 ಮಿ.ಲೀ. + 300 ಮಿ.ಲೀ. = 500 ಮಿ.ಲೀ.

500 ಮಿ.ಲೀ. + 500 ಮಿ.ಲೀ. = 1000 ಮಿ.ಲೀ.

3. ಆಕಾರಗಳ ಪರಿಚಯ ಮಾಡಿಸಿ.




## ಚಟುವಟಿಕೆ

1. ವೃತ್ತದಲ್ಲಿ ಕೊಟ್ಟಿರುವ ಅಕ್ಷರವನ್ನು ಆಯಾ ಸಾಲಿನಲ್ಲಿ ಗುರುತಿಸಿ ವೃತ್ತ ಹಾಕಿಸಿ.

| | | | | | |
|---|---|---|---|---|---|
| (ಲ್ಲ) | ಲ್ಲ | ಪ್ಪ | ಲ್ಲ | ಗ್ಗ | ಳ್ಳ |
| (ಯ್ಯ) | ದ್ಯ | ಯ್ಯ | ಮ್ಯ | ಯ್ಯ | ವ್ಯ |
| (ಢ) | ದ | ಢ | ಥ | ಧ | ಢ |
| (ಋ) | ಋ | ಐ | ಬು | ಋ | ಖು |

2. ಓದಿಸಿ.

ಋಷಿ ಮೂಢ ಋತು ಐದು ಅಯ್ಯೋ ಔಷಧ
ಹಲ್ಲು ರೂಢಿ ಬೆಲ್ಲ ಅಕ್ಕ ಉಯ್ಯಾಲೆ
ಮಲ್ಲಯ್ಯ ಕಾನೂರಿನವನು
ರಾಮಯ್ಯನಿಗೆ ಇದು ಮೂಢನಂಬಿಕೆ ಎಂದು ತಿಳಿಸಿದರು
ಮಲ್ಲಯ್ಯ ಮತ್ತು ಊರಿನ ಜನ ನಿಜವ ತಿಳಿದರು

**3. ಬರೆಯಿಸಿ.**

ಢ

ಲ್ಲ

ಯ್ಯ

ಝ

ಕಲ್ಲು

ಝಣ

ಗಾಢ

ಕುನ್ನಯ್ಯ

**4. ಕೆಳಗಿನ ವಾಕ್ಯಗಳನ್ನು ಬರೆಯಿಸಿ.**

ಮಲ್ಲಯ್ಯ ರಾಮಯ್ಯ ಗೆಳೆಯರು

ಹುಡುಗನಿಗೆ ದೇವರ ಅವಾಹನೆ, ಸುಳ್ಳು ಎಂದು ತಿಳಿಸಿದರು

ಮೂಢನಂಬಿಕೆ ಬಿಡಬೇಕು ತಿಳುವಳಿಕೆ ಪಡೆದು ಬದುಕಬೇಕು

**5. ಬಿಟ್ಟ ಸ್ಥಳವನ್ನು ತುಂಬಿಸಿ.**

ತಾರಿಣಿಗೆ ________ಆಯಿತು

ಮಲ್ಲಯ್ಯನಿಗೆ ಇದು ________ ಎಂದು ತಿಳಿಸಿದರು

ಕಿರಣ ________ ಬಾಲಕ

ಸುಖವಾದ ಜೀವನಕ್ಕೆ ________ ಬೇಕು

**6. ಬಿಟ್ಟಿರುವ ಸ್ಥಳವನ್ನು ಆವರಣದಲ್ಲಿರುವ ಸರಿಯಾದ ಸಂಖ್ಯೆ ಆರಿಸಿ ತುಂಬಿಸಿ.**

ಒಂದು ಲೀಟರಿಗೆ ______ ಮಿಲಿ ಲೀಟರ್ (500, 200, 1000)

ಅರ್ಧ ಲೀಟರಿಗೆ ______ ಮಿಲಿ ಲೀಟರ್ (1000, 750, 500)

ಕಾಲು ಲೀಟರಿಗೆ ______ ಮಿಲಿ ಲೀಟರ್ (250, 500, 750)

ಮುಕ್ಕಾಲು ಲೀಟರಿಗೆ _____ ಮಿಲಿ ಲೀಟರ್ (500, 750, 1000)

**7. ಕೆಳಗೆ ಕೊಟ್ಟಿರುವ ಕೂಡುವ ಲೆಕ್ಕಗಳನ್ನು ಮಾಡಿಸಿ.**

100 ಮಿ.ಲೀ. + 50 ಮಿ.ಲೀ. = ____________

200 ಮಿ.ಲೀ. + 50 ಮಿ.ಲೀ. = ____________

200 ಮಿ.ಲೀ. + 200 ಮಿ.ಲೀ. = ___________

500 ಮಿ.ಲೀ. + 100 ಮಿ.ಲೀ. = ____________

## ಕಲಿಕಾ ಪ್ರಗತಿ–4

1. ಓದಿಸಿ.

ಕೋಣೆ ಗೌರವ ಋಣ ಅಯ್ಯ ಅನಾಥ

ಹಲ್ಲು ಅನ್ನ ಐದು ಹಗ್ಗ ಔಷಧ

ಅಕ್ಕ ಗುಡ್ಡ ಮಗ್ಗ ಅಪ್ಪ ವಯಸ್ಸು

ಪುಟ್ಟಣ್ಣ ರಾಮಕ್ಕ ನಗರಕ್ಕೆ ವಲಸೆ ಬಂದರು

ಶೌಚಾಲಯ ಕಟ್ಟಿಸಲು ಮನಸ್ಸು ಬೇಕು

ಚಿನ್ನಕ್ಕ ಉಳಿತಾಯ ಖಾತೆ ತೆರೆದಳು

2. ನೋಡಿ ಬರೆಯಿಸಿ.

ಪುಂಡರಿಗೆ ಸೆರೆವಾಸ ಆಯಿತು

...............................................................................................

...............................................................................................

ಜನರು ಬಯಲು ಶೌಚ ಬಿಡಬೇಕು

...............................................................................................

...............................................................................................

ಸಂತೋಷನಿಗೆ ಔಷಧಾಲಯದಲ್ಲಿ ಕೆಲಸ

...............................................................................................

...............................................................................................

ಬಾಣಂತಿಯರನು ಊರ ಹೊರಗಿಡುವುದು ಮೂಢನಂಬಿಕೆ

...............................................................................................

...............................................................................................

**3. ಕೆಳಗಿನ ಸಾಲುಗಳಲ್ಲಿ ಪದಗಳು ಹಿಂದು ಮುಂದಾಗಿವೆ. ಅವುಗಳನ್ನು ವಾಕ್ಯದಲ್ಲಿ ಸರಿಯಾಗಿ ಜೋಡಿಸಿ ಬರೆಯಿಸಿ.**

ಕಂಡರು ಮಂಡರು ಗೌರಕ್ಕನನ್ನು ಐವರು

..........................................................................................................

..........................................................................................................

ಇವೆ ಶೌಚಾಲಯಗಳು ಸಂಚಾರಿ ನಗರಗಳಲ್ಲಿ

..........................................................................................................

..........................................................................................................

ತಿಳಿಸಿದಳು ಅಂಚೆ ಕಚೇರಿ ಉಷಾ ಬಗ್ಗೆ ಸೇವೆಗಳ

..........................................................................................................

..........................................................................................................

ತಿಳಿಸಿದರು ಮೂಢನಂಬಿಕೆ ಇದು ಎಂದು ಮಲ್ಲಯ್ಯನಿಗೆ

..........................................................................................................

..........................................................................................................

**4. ಚಿತ್ರ ನೋಡಿ ಅವುಗಳ ಹೆಸರು ಬರೆಯಿಸಿ.**










.................... .................... .................... ....................

.................... .................... .................... ....................

**5. ಕೆಳಗಿನ ಪದಗಳನ್ನು ಬಳಸಿ ವಾಕ್ಯ ಬರೆಯಿಸಿ**

ಉಳಿತಾಯ : ..........................................................................................

..........................................................................................

ಔಷಧ : ..........................................................................................

..........................................................................................

ಮೂಢನಂಬಿಕೆ : ..........................................................................................

..........................................................................................

ಮನಸ್ಸು : ........................................................................................................
........................................................................................................

6. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿಸಿ.

ಪುಟ್ಟಣ್ಣ ರಾಮಕ್ಕ ಯಾವ ಕಾನೂನಿನ ನೆರವು ಪಡೆದರು?

........................................................................................................

........................................................................................................

ಬಯಲು ಶೌಚದಿಂದ ಏನು ಆಗುವುದು?

........................................................................................................

........................................................................................................

ಚೆನ್ನಕ್ಕ ಬಂಧು ಬಳಗದವರಿಗೆ ಏನು ನೀಡಿದಳು?

........................................................................................................

........................................................................................................

ಮಲ್ಲಯ್ಯನ ಗೆಳೆಯ ಯಾರು?

........................................................................................................

........................................................................................................

7. ಈ ಕೆಳಗಿನ ಕೂಡುವ ಲೆಕ್ಕಗಳನ್ನು ಮಾಡಿಸಿ.

$$\begin{array}{r} 37 \\ +46 \\ \hline \\ \hline \end{array} \qquad \begin{array}{r} 65 \\ +18 \\ \hline \\ \hline \end{array} \qquad \begin{array}{r} 73 \\ +08 \\ \hline \\ \hline \end{array}$$

8. ಈ ಕೆಳಗಿನ ಕಳೆಯುವ ಲೆಕ್ಕಗಳನ್ನು ಮಾಡಿಸಿ.

$$\begin{array}{r} 36 \\ -18 \\ \hline \\ \hline \end{array} \qquad \begin{array}{r} 84 \\ -36 \\ \hline \\ \hline \end{array} \qquad \begin{array}{r} 64 \\ -28 \\ \hline \\ \hline \end{array}$$

9. ಈ ಕೆಳಗಿನ ನಾಣ್ಯಗಳ ಮೊತ್ತವನ್ನು ಕೂಡಿ ಬರೆಯಿಸಿ.




+




= ________

10. ಬಿಟ್ಟ ಸ್ಥಳ ತುಂಬಿಸಿ.

ಅರ್ಧ ಲೀಟರಿಗೆ ____________ ಮಿಲಿ ಲೀಟರು

ಕಾಲು ಲೀಟರಿಗೆ ____________ ಮಿಲಿ ಲೀಟರು

11. ಕೆಳಕಂಡ ಆಕಾರಗಳನ್ನು ಗುರುತಿಸಿ ಹಾಗೂ ಅವುಗಳ ಹೆಸರನ್ನು ಬರೆಯಿಸಿ.



.......................... .......................... .......................... ..........................

.......................... .......................... .......................... ..........................

12. ಬ್ಯಾಂಕಿನಲ್ಲಿ ನೀಡಲಾಗುವ ಹಣ ಹಿಂಪಡೆಯುವ ಮಾದರಿ ಅರ್ಜಿ ನಮೂನೆಯನ್ನು ಭರ್ತಿ ಮಾಡಿಸಿ.



भारतीय स्टेट बैंक
STATE BANK OF INDIA
शाखा BRANCH

बचत बैंक आहरण फार्म
SAVINGS BANK WITHDRAWAL FORM

दिनांक
Date ..............................

नोट : यह फार्म चेक नहीं है। इस फार्म के साथ पासबुक प्रस्तुत नहीं किए जाने पर भुगतान के लिए इनकार किया जाएगा। यह भुगतान केवल मूल (होम) शाखा में ही किया जाएगा।

NOTE : This form is not a Cheque. Payment will be refused if the pass book is not produced with this form. This payment will be made only at the Home Branch.

खाता संख्या
ACCOUNT NUMBER

कृपया मुझे / हमें Please pay self/ourselves ₹ ...........................( ₹ ...........................
............................................................ मात्र/only)
का भुगतान करें और मेरे / हमारे उपर्युक्त बचत/बैंक खाते को यह राशि नामे करें I/ and debit the amount to my/our above savings bank account.

फोन/मोबाइल नं./Phone/Mobile No.

खाताधारक (कों) के हस्ताक्षर Signature(s) of the Account Holder(s)

कार्यालय उपयोग हेतु/FOR OFFICE USE

| पासकर्ता/Passed by | हस्ताक्षर/Signature | पासकर्ता/Passed by | हस्ताक्षर/Signature |
| --- | --- | --- | --- |
| एसडब्ल्यूओ/SWO | | पासकर्ता अधिकारी/PASSING OFFICER | |

ಪಾಠ 17

# ನಮ್ಮ ಕೈಯಲ್ಲಿ ನಮ್ಮ ಜಗತ್ತು

ಮ್ಮ ೈ ತ್ತ







| | | | |
|---|---|---|---|
| ಮ್ಮ | ಅಮ್ಮ | ತಮ್ಮ | ನೆಮ್ಮದಿ |
| ೈ | ಕೈ | ಕೈಸಾಲ | ಮೈಸೂರು |
| ತ್ತ | ಭತ್ತ | ಹುತ್ತ | ಸಂಪತ್ತು |

ರಾಮನಹಳ್ಳಿ ಒಂದು ಊರು. ಅನಿತ ಆ ಊರಿನವಳು. ರಾಜೀವ ಪಕ್ಕದ ಹಳ್ಳಿಯ ರೈತ. ರಾಜೀವನ ಜೊತೆಗೆ ಅನಿತಾಳ ಮದುವೆ ಆಯಿತು.

ಗಂಡ ಹೆಂಡತಿ ಕೈ ಜೋಡಿಸಿ ದುಡಿದರು. ಅವರ ಜೀವನ ನೆಮ್ಮದಿಯಿಂದ ಸಾಗಿತ್ತು.

ಕೆಲವು ದಿನಗಳು ಕಳೆದವು. ರಾಜೀವ ದುಡಿಯುವುದನ್ನು ಬಿಟ್ಟ. ಸಾರಾಯಿ ಕುಡಿಯಲು ಶುರು ಮಾಡಿದ. ಜೂಜಿನ ಚಟವೂ ಅಂಟಿತು. ಹೊತ್ತು–ಗೊತ್ತು ಇಲ್ಲದೆ ಮನೆಗೆ ಬರುತ್ತಿದ್ದ. ಕುಡಿದ ಅಮಲಿನಲ್ಲಿ ಹೆಂಡತಿಗೆ ಬಯ್ಯುತ್ತಿದ್ದ, ಹೊಡೆಯುತ್ತಿದ್ದ. ಮನೆಯ ನೆಮ್ಮದಿ ಹಾಳಾಯಿತು.

ಊರ ಜನ ರಾಜೀವನಿಗೆ ಬುದ್ಧಿ ಹೇಳಿದರು. ರಾಜೀವ ದಾರಿಗೆ ಬರಲಿಲ್ಲ. ಅನಿತಾ ಮಕ್ಕಳ ಏಳಿಗೆಗಾಗಿ ಚಿಂತಿಸಿದಳು. ಸಂಪಾದನೆಯ ದಾರಿ ಹುಡುಕಿದಳು.

ಅನಿತಾ ಗೆಳತಿಯರ ಸಹಾಯ ಪಡೆದಳು. ಗೌರಿ ಹೆಸರಿನ ಮಹಿಳಾ ಗುಂಪು ರಚಿಸಿದಳು. ತರಬೇತಿ ಪಡೆದರು. ಗೊಂಬೆ, ಕೈಚೀಲ, ತೋರಣ ತಯಾರಿಕೆ ಕಲಿತರು. ಊರೂರು ತಿರುಗಿದರು. 'ಗೌರಿ' ಹೆಸರಿನ ಕರಕುಶಲ ಸಾಮಾನುಗಳು ಹೆಸರುವಾಸಿ ಆದವು. ಜಾಲತಾಣಗಳ ಮೂಲಕವೂ ಮಾರಾಟ ಮಾಡಿದರು. ದಿನದಿನಕ್ಕೆ ಲಾಭ ಹೆಚ್ಚಿತ್ತು. ಈಗ ಎಲ್ಲರೂ ಹೆಮ್ಮೆಯಿಂದ ಬದುಕುತ್ತಿದ್ದಾರೆ.

ಅನಿತಾಳ ಗಂಡನಿಗೆ ತನ್ನ ತಪ್ಪಿನ ಅರಿವಾಯಿತು. ಎಚ್ಚೆತ್ತುಕೊಂಡ. ಹೆಂಡತಿಯ ಜೊತೆ ಅವನೂ ಕೈ ಜೋಡಿಸಿದ.

ನಮ್ಮ ಕೈಯಲ್ಲಿ ನಮ್ಮ ಜಗತ್ತು ಅಂದರೆ ಇದೇ ಅಲ್ಲವೇ?

ಇದನ್ನು ಕಲಿಸಿ :

' ್ರ ' ಇದು ರ ಅಕ್ಷರದ ಒತ್ತಕ್ಷರ. ಇದು ಬೇರೆ ಬೇರೆ ಅಕ್ಷರಗಳಿಗೆ ಬರುವುದನ್ನು ಕಲಿಸಿ.

| | | | |
|---|---|---|---|
| ತ್ರ | ಸರ್‍ತ್ರನೆ | ಕರ್‍ತ್ರಗೆ | ಬರ್‍ತ್ರನೆ |
| ಗ್ರ | ಗ್ರಹ | ಮಿತ್ರ | ಅಕ್ರಮ |

ಕಾಗೆ ಬರ್‍ತ್ರನೆ ಹಾರಿ ಹೋಯಿತು
ಸರ್‍ತ್ರನೆ ಬಂದು ಬರ್‍ತ್ರನೆ ಹೋದರು
ಒಳ್ಳೆಯ ಮಿತ್ರರು ಯಾವಾಗಲೂ ಇರಬೇಕು
ಅಕ್ರಮ ಸಂಪಾದನೆ ಒಳ್ಳೆಯದಲ್ಲ




ತೂಕದ ಅಳತೆ :

1. ತೂಕದ ಬಟ್ಟುಗಳನ್ನು ಪರಿಚಯಿಸಿ.




ಕಿಲೋ ಗ್ರಾಂ ಅಂದರೆ ಕೆ.ಜಿ. ಎಂದೂ ಕರೆಯುವರು.

ಒಂದು ಕಿಲೋ (ಕೆ.ಜಿ.) ಅಂದರೆ 1000 ಗ್ರಾಂ

ಮುಕ್ಕಾಲು ಕಿಲೋ (ಕೆ.ಜಿ.) ಅಂದರೆ 750 ಗ್ರಾಂ

ಅರ್ಧ ಕಿಲೋ (ಕೆ.ಜಿ.) ಅಂದರೆ 500 ಗ್ರಾಂ

ಕಾಲು ಕಿಲೋ (ಕೆ.ಜಿ.) ಅಂದರೆ 250 ಗ್ರಾಂ

**2. ತೂಕದ ಅಳತೆಯ ಕೂಡುವ ಲೆಕ್ಕ ಕಲಿಸಿ.**

| | | | | |
|---|---|---|---|---|
| 50 ಗ್ರಾಂ | + | 50 ಗ್ರಾಂ | = | 100 ಗ್ರಾಂ |
| 100 ಗ್ರಾಂ | + | 50 ಗ್ರಾಂ | = | 150 ಗ್ರಾಂ |
| 100 ಗ್ರಾಂ | + | 100 ಗ್ರಾಂ | = | 200 ಗ್ರಾಂ |
| 200 ಗ್ರಾಂ | + | 50 ಗ್ರಾಂ | = | 250 ಗ್ರಾಂ |

**3. ಅನಿತಾಳು ತನ್ನ ರೈಲು ಪ್ರಯಾಣದ ವಿವರವುಳ್ಳ ಟಿಕೆಟ್ ಹಂಚಿಕೊಂಡಿದ್ದಾಳೆ, ಇದನ್ನು ಗಮನಿಸಿ.**




1. ಅನಿತಾಳು ಪ್ರಯಾಣಿಸುತ್ತಿರುವ ರೈಲುಗಾಡಿಯ ಟಿಕೆಟ್ ಸಂಖ್ಯೆ ಎಷ್ಟು ?

.......................................................................................................

2. ಅನಿತಾ ಯಾವ ಊರಿನಿಂದ ಯಾವ ಊರಿಗೆ ತೆರಳುತ್ತಿದ್ದಾಳೆ?

.......................................................................................................

3. ಅನಿತಾಳ ಜೊತೆ ಒಟ್ಟು ಎಷ್ಟು ಜನ ಪ್ರಯಾಣಿಸುತ್ತಿದ್ದಾರೆ?

.......................................................................................................

4. ರೈಲು ಗಾಡಿ ಹೊರಡುವ ಸಮಯ ಯಾವುದು?

.......................................................................................................

## ಚಟುವಟಿಕೆ

**1. ವೃತ್ತದಲ್ಲಿರುವ ಅಕ್ಷರವನ್ನು ಆಯಾ ಸಾಲಿನಲ್ಲಿ ಗುರುತಿಸಿ ವೃತ್ತ ಹಾಕಿಸಿ.**

| | | | | | |
|---|---|---|---|---|---|
| ಮ್ಮ | ನ್ನ | ಮ್ಮಿ | ಮ್ಮ | ಮ್ಮೆ | ಮ್ಮ |
| ಕೈ | ಕೊ | ಕೈ | ಕ್ಕ | ಕೈ | ರೈ |
| ತ್ತ | ತ್ತ | ತ್ತ | ತ್ತೆ | ತ್ತೊ | ತ್ತಿ |
| ರ್ರ | ಕ್ರ | ರ್ರ | ದ್ರ | ರ್ರ | ಲ್ರ |
| ಗ್ರ | ಗ್ರ | ಗ್ರಿ | ಗ್ರ | ಗ್ರೆ | ದ್ರ |

**2. ಓದಿಸಿ.**

| | | | |
|---|---|---|---|
| ದೈವ | ಪೈರು | ಅಯ್ಯ | ಋತು |
| ಗ್ರಹ | ದ್ರವ | ದಮ್ಮು | ಬಸ್ಸು |
| ಸರ್ರನೆ | ಇಪ್ಪತ್ತು | ಕತ್ತಲು | ಮೈದುನ |
| ಹಿತ್ತಲು | ನೆಮ್ಮದಿ | ಕರ್ರಗೆ | ಸುಮ್ಮನೆ |

ಕೈಕಾಲು ಮುಖ ತೊಳೆದು ಊಟ ಮಾಡಿ
ಅಮ್ಮ ಕೈ ತುತ್ತು ತಿನ್ನಿಸಿ ಬೆಳೆಸಿದಳು
ನಮ್ಮ ಕೈಯಲ್ಲಿ ನಮ್ಮ ಜಗತ್ತು

**3. ಬರೆಯಿಸಿ.**

| ಅತ್ತೆ | ಕ್ರಮ | ಬೈಗುಳ | ಹೆಮ್ಮರ | ಕರ್ರಗೆ |
|---|---|---|---|---|
| ..................... | ..................... | ..................... | ..................... | ..................... |
| ..................... | ..................... | ..................... | ..................... | ..................... |
| ..................... | ..................... | ..................... | ..................... | ..................... |
| ..................... | ..................... | ..................... | ..................... | ..................... |

ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ

....................................................................................................

....................................................................................................

ದುರಾಸೆ ನೆಮ್ಮದಿಯನ್ನು ಹಾಳು ಮಾಡುತ್ತದೆ.

....................................................................................................

....................................................................................................

ಕಾಯಿಲೆ ಬಂದಾಗ ಔಷಧ ಉಪಯೋಗಿಸಿ

....................................................................................................

....................................................................................................

4. 'ಅ' ಪಟ್ಟಿಯಲ್ಲಿರುವ ಒತ್ತಕ್ಷರಗಳನ್ನು 'ಬ' ಪಟ್ಟಿಯಲ್ಲಿರುವ ಅವುಗಳ ಮೂಲ ಅಕ್ಷರಗಳ ಜೊತೆಗೆ ಗೆರೆ ಎಳೆದು ಹೊಂದಿಸಿ.

| ಅ | ಬ |
|---|---|
| ್ತ | ತ |
| ್ಸ | ಸ |
| ್ರ | ರ |
| ್ಲ | ಯ |
| ್ಯ | ಲ |
| ್ಮ | ಮ |

5. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿಸಿ.

ರಾಜೀವ ಕುಡಿದ ಅಮಲಿನಲ್ಲಿ ಏನು ಮಾಡುತ್ತಿದ್ದ?

....................................................................................................

....................................................................................................

ಅನಿತ ಯಾರ ಸಹಾಯ ಪಡೆದಳು?

....................................................................................................

....................................................................................................

ಅನಿತಾಳ ಗಂಡ ಕೊನೆಗೆ ಏನು ಮಾಡಿದ?

....................................................................................................

....................................................................................................

**6. ಉತ್ತರ ಬರೆಯಿರಿ.**

ಒಂದು ಕಿಲೋ.ಗ್ರಾಂ ಅಥವಾ ಕೆ.ಜಿ.ಗೆ ಎಷ್ಟು ಗ್ರಾಂ ಗಳು?

..............................................................................................................................

..............................................................................................................................

ಅರ್ಧ ಕೆ.ಜಿ.ಗೆ ಎಷ್ಟು ಗ್ರಾಂ ಗಳು?

..............................................................................................................................

